

بسم اللهِ الرَّحمٰنِ الرَّحيم

# ಬದ್ರ್ ಯುದ್ಧದ ಮಹತ್ವ

# ಜಲ್ಸಾ ಸಾಲಾನ ಯು.ಕೆ.ಯ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **21-07-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬದ್ರ್ ಯುದ್ಧ ಕೊನೆಗೊಂಡ ನಂತರ ಬಂಧಿಗಳೊಂದಿಗೆ ಹಝ್ರತ್ ಪೈಗಂಬರ್(ಸ) ತೋರಿಸಿದ ಉತ್ತಮ ವರ್ತನೆಯ ಬಗ್ಗೆ ತಬ್‌ಖಾತ್ ಇಬ್ನು ಸಅದ್‌ನಲ್ಲಿ ಹೀಗೆ ಬರೆಯಲಾಗಿದೆ: ಬದ್ರಿನ ಕೈದಿಗಳಲ್ಲಿ ಹಝ್ರತ್ ಪೈಗಂಬರ್(ಸ)ರ ದೊಡ್ಡಪ್ಪರಾದ ಅಬ್ಬಾಸ್(ರ) ಕೂಡ ಇದ್ದರು. ಹಝ್ರತ್ ಪೈಗಂಬರ್(ಸ) ಅಂದು ರಾತ್ರಿ ನಿದ್ದೆ ಮಾಡದೇ ಎಚ್ಚರವಾಗಿಯೇ ಇರುವುದನ್ನು ಕಂಡು ಸಹಾಬಿಯರಲ್ಲಿ ಒಬ್ಬರು ಕೇಳಿದರು: ಅಲ್ಲಾಹನ ನಬಿಯೇ, ನೀವು ನಿದ್ರಿಸದೇ ಇರಲು ಕಾರಣವೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಅಬ್ಬಾಸ್‌ರ ನರಳಾಟದ ದನಿಯಾಗಿದೆ. ಆಗ ಒಬ್ಬರು ಅಬ್ಬಾಸ್(ರ)ರ ಕಟ್ಟನ್ನು ಸಡಿಲಗೊಳಿಸಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: ಈಗ ನಾನು ಅಬ್ಬಾಸ್ ರೋದಿಸುತ್ತಿರುವುದನ್ನು ಕೇಳದೇ ಇರಲು ಕಾರಣವೇನು? ಆಗ ಆ ವ್ಯಕ್ತಿ ಹೇಳಿದರು: ನಾನು ಅಬ್ಬಾಸ್‌ರ ಕಟ್ಟನ್ನು ಸ್ವಲ್ಪ ಸಡಿಲಗೊಳಿಸಿರುವೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ ಎಲ್ಲ ಕೈದಿಗಳ ಕಟ್ಟುಗಳನ್ನು ಸಡಿಲಗೊಳಿಸಿರಿ.

ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಕೈದಿಗಳೊಂದಿಗೆ ಸೌಮ್ಯವಾಗಿಯೂ ಕಾರುಣ್ಯದಿಂದಲೂ ವರ್ತಿಸಬೇಕು ಮತ್ತು ಅವರ ಆರಾಮದ ಬಗ್ಗೆ ಕಾಳಜಿ ವಹಿಸಬೇಕು ಎಂದು ಹಝ್ರತ್ ಪೈಗಂಬರ್(ಸ) ತಾಕೀತು ಮಾಡಿದರು. ತಮ್ಮ ಯಜಮಾನನ ಪ್ರತಿಯೊಂದು ಬಯಕೆಯನ್ನು ಈಡೇರಿಸುವ ತವಕದಲ್ಲಿ ಇದ್ದ ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ಈ ಉಪದೇಶವನ್ನು ಎಷ್ಟು ಸುಂದರವಾಗಿ ಅನುಸರಿಸಿದರು ಎಂದರೆ, ಲೋಕದ ಚರಿತ್ರೆಯಲ್ಲಿ ಇಂತಹ ಉದಾಹರಣೆ ಇಲ್ಲ.

ಕೈದಿಗಳೊಂದಿಗೆ ಈ ವಾತ್ಸಲ್ಯದ ವರ್ತನೆಯ ಬಗ್ಗೆ ಸರ್ ವಿಲಿಯಂ ಮ್ಯೂರ್ ಹೀಗೆ ಹೇಳುತ್ತಾರೆ: ಮುಹಮ್ಮದ್‌ರ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ನಿರ್ದೇಶನ ಪ್ರಕಾರ ಅನ್ಸಾರರು ಮತ್ತು ಮುಹಾಜಿರರು ಸತ್ಯನಿಷೇಧಿಗಳ ಕೈದಿಗಳೊಂದಿಗೆ ಬಹಳ ಪ್ರೀತಿ ಮತ್ತು ಕಾರುಣ್ಯದಿಂದ ವರ್ತಿಸಿದರು. ಚರಿತ್ರೆಯಲ್ಲಿ ಕೆಲವು ಕೈದಿಗಳ ಸ್ವಂತ ಸಾಕ್ಷ್ಯ ಹೀಗೆ ಪ್ರಸ್ತಾಪಿಸಲಾಗಿದೆ: 'ಮದೀನ ನಿವಾಸಿಗಳನ್ನು ಅಲ್ಲಾಹನು ಚೆನ್ನಾಗಿ ಇರಿಸಲಿ. ಅವರು ನಮ್ಮನ್ನು ಸವಾರಗೊಳಿಸಿ, ತಾವು ಕಾಲ್ನಡಿಗೆಯಾಗಿ ಹೋಗುತ್ತಿದ್ದರು. ನಮಗೆ ಗೋದಿಯ ಬೇಯಿಸಿದ ರೊಟ್ಟಿಯನ್ನು ಕೊಡುತ್ತಿದ್ದರು ಮತ್ತು ಅವರು ಸ್ವತಃ ಕೇವಲ ಖರ್ಜೂರವನ್ನು ತಿಂದು ಹಸಿವು ನೀಗಿಸುತ್ತಿದ್ದರು.' ಈ ಉತ್ತಮ ವರ್ತನೆಯ ಪ್ರಭಾವದಿಂದ ಕೆಲವು ಕೈದಿಗಳು ಮುಸ್ಲಿಮರಾದರು ಎಂಬುದರಲ್ಲಿ ನಾವು ಆಶ್ಚರ್ಯಪಡಬೇಕಾಗಿಲ್ಲ. ಮುಸ್ಲಿಮರಾದ ಅಂತಹ ಕೈದಿಗಳನ್ನು ತಕ್ಷಣವೇ ಬಿಡುಗಡೆಗೊಳಿಸಲಾಯಿತು. ಮುಸ್ಲಿಮರಾಗದ ಕೈದಿಗಳ ಮೇಲೂ ಈ ಉತ್ತಮ ಸದ್ವರ್ತನೆಯ ಬಹಳ ಉತ್ತಮ ಪ್ರಭಾವವಿತ್ತು.

ಬದ್ರ್ ಯುದ್ಧ ಮತ್ತು ಅದರ ಪ್ರಭಾವಗಳ ಬಗ್ಗೆ ಬರೆಯಲಾಗಿದೆ. ಬದ್ರ್ ಯುದ್ಧದ ವಿಜಯದ ಸುವಾರ್ತೆಯೊಂದಿಗೆ ಅಬ್ದುಲ್ಲಾಹ್ ಬಿನ್ ರವಾಹ(ರ) ಮತ್ತು ಝೈದ್ ಬಿನ್ ಹಾರಿಸ(ರ) ಮದೀನಕ್ಕೆ ತಲುಪಿದಾಗ ಮತ್ತು ಅವರ ಬಾಯಿಯಿಂದ ವಿಜಯದ ಸುವಾರ್ತೆಯ ಘೋಷಣೆಯನ್ನು ಕೇಳಿ ಅಲ್ಲಾಹನ ಶತ್ರು, ಯಹೂದಿ ಕಅ್‌ಬ್ ಬಿನ್ ಅಶ್ರಫ್ ಈ ವಾರ್ತೆಯನ್ನು ಅಲ್ಲಗಳೆದನು ಮತ್ತು ಹೀಗೆ ಹೇಳಿದನು: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಈ ದೊಡ್ಡ ದೊಡ್ಡ ಮುಖಂಡರನ್ನು ವಧಿಸಿರುವುದಾದರೆ ಭೂಮಿಯ ಮೇಲೆ ಇರುವುದಕ್ಕಿಂತ ಭೂಮಿಯ ಅಡಿಯಲ್ಲಿ ಇರುವುದು ಲೇಸು. (ಎಂದರೆ ಜೀವಂತವಾಗಿ ಇರುವುದಕ್ಕಿಂತ ಸಾಯುವುದು ಮೇಲು ಎಂದು ಅರ್ಥ.)

ಮೌಲಾನಾ ಶಿಬ್ಲಿ ನೂಮಾನಿ ತನ್ನ ಗ್ರಂಥದಲ್ಲಿ ಬದ್ರ್ ಯುದ್ಧದ ಪರಿಣಾಮಗಳ ಬಗ್ಗೆ ಬರೆಯುತ್ತಾರೆ: ಬದ್ರ್ ಯುದ್ಧವು ಧಾರ್ಮಿಕ ಮತ್ತು ರಾಷ್ಟ್ರೀಯ ಸ್ಥಿತಿಗತಿಗಳ ಮೇಲೆ ಅನೇಕ ವಿಧ ಪ್ರಭಾವಗಳನ್ನು ಬೀರಿವೆ. ಸತ್ಯದಲ್ಲಿ ಇದು ಇಸ್ಲಾಮಿನ ಪ್ರಗತಿಯ ಮೊದಲ ಹೆಜ್ಜೆಯಾಗಿತ್ತು. ಇಸ್ಲಾಮಿನ ಅಭಿವೃದ್ಧಿಗೆ ದೊಡ್ಡ ತಡೆಯಾಗಿದ್ದ ಖುರೈಶಿನ ದೊಡ್ಡ ದೊಡ್ಡ ಮುಖಂಡರು ಒಬ್ಬೊಬ್ಬರಾಗಿ ನಾಶವಾದರು.

ಉತ್ಬ ಮತ್ತು ಅಬೂಜಹಲಿನ ಮರಣದಿಂದ ಖುರೈಶಿ ಆಡಳಿತದ ಕಿರೀಟವನ್ನು ಅಬೂಸುಫ್‌ಯಾನಿನ ತಲೆಯಲ್ಲಿ ಇರಿಸಲಾಯಿತು. ಹೀಗೆ ಅಮವಿ ಆಡಳಿತದ ಆರಂಭವಾಯಿತು. ಆದರೆ ಖುರೈಶಿನ ಯಥಾರ್ಥ ಶಕ್ತಿ ಮತ್ತು ಸಾಮರ್ಥ್ಯದ ಮಟ್ಟ ತಗ್ಗಿತು. ಮದೀನದಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್ ಅದುವರೆಗೂ ಘೋಷಿತ ಕಾಫಿರ್ ಆಗಿದ್ದನು. ಬದ್ರ್ ನಂತರ ಆತನು ಇಸ್ಲಾಂ ಸ್ವೀಕರಿಸಿದರೂ ಕಪಟ ಶ್ವಾಸಿಯಾಗಿಯೇ ಮುಂದುವರಿದನು. ಕಪಟ ವಿಶ್ವಾಸಿಯಾಗಿಯೇ ಮರಣಗೊಂಡನು. ಈ ಸ್ಪಷ್ಟವಾದ ವಿಜಯವು ಸತ್ಯನಿಷೇಧಿಗಳ ಅಸೂಯೆಯ ಉರಿಯನ್ನು ವರ್ಧಿಸಿತು ಮತ್ತು ಅವರಿಗೆ ಅದನ್ನು ನಿಯಂತ್ರಿಸಲು ಸಾಧ್ಯವಾಗಲಿಲ್ಲ. ಬದ್ರ್ ಯುದ್ಧದ ನಂತರ ಪ್ರತಿಯೊಂದು ಮನೆ ಸಂತಾಪ ಕೇಂದ್ರವಾಯಿತು. ಬದ್ರ್ ಯುದ್ಧದಲ್ಲಿ ವಧಿಸಲ್ಪಟ್ಟವರ ಪರವಾಗಿ ಪ್ರತೀಕಾರ ಮಾಡಲು ಮಕ್ಕಾದ ಮಕ್ಕಳು ಕೂಡ ವ್ಯಾಕುಲಗೊಂಡಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಸತ್ಯನಿಷೇಧಿಗಳ ಮೇಲೂ ಮುಸ್ಲಿಮರ ಮೇಲೂ ಬದ್ರ್ ಯುದ್ಧದ ಪ್ರಭಾವ ಅತ್ಯಂತ ಆಳ ಮತ್ತು ದೀರ್ಘಕಾಲೀನವಾಗಿತ್ತು. ಆದ್ದರಿಂದ

ಈ ಯುದ್ಧಕ್ಕೆ ಇಸ್ಲಾಮಿನ ಚರಿತ್ರೆಯಲ್ಲಿ ವಿಶಿಷ್ಟವಾದ ಪ್ರಾಧಾನ್ಯವಿದೆ. ಪವಿತ್ರ ಖುರ್‌ಆನ್ ಕೂಡ ಈ ಯುದ್ಧವನ್ನು ಯೌಮುಲ್ ಫುರ್ಖಾನ್ ಎಂದು ಹೆಸರಿಸಿದೆ. ಎಂದರೆ ಇಸ್ಲಾಂ ಮತ್ತು ಸತ್ಯನಿಷೇಧದ ನಡುವೆ ಒಂದು ಸ್ಪಷ್ಟವಾದ ತೀರ್ಪು ಉಂಟಾದ ದಿನ. ನಿಸ್ಸಂಶಯವಾಗಿಯೂ ಬದ್ರ್ ಯುದ್ಧದ ನಂತರವೂ ಖುರೈಶಿಗಳ ಮತ್ತು ಮುಸ್ಲಿಮರ ನಡುವೆ ಅತ್ಯಂತ ಕಠಿಣವಾದ ಯುದ್ಧಗಳು ನಡೆದಿದ್ದುವು ಮತ್ತು ಮುಸ್ಲಿಮರ ಮೇಲೆ ಅತ್ಯಂತ ಅಪಾಯಕರವಾದ ಸಂದರ್ಭಗಳು ಸಹ ಬಂದಿದ್ದುವು. ಆದರೂ ಬದ್ರ್ ಯುದ್ಧದಲ್ಲಿ ಮಕ್ಕಾದ ಸತ್ಯನಿಷೇಧಿಗಳ ಬೆನ್ನೆಲುಬು ಮುರಿದುಹೋಗಿತ್ತು. ಅದನ್ನು ಅನಂತರದ ಯಾವುದೇ ಶಕ್ತವಾದ ದಾಳಿಯಿಂದಲೂ ಸ್ಥಾಯಿಯಾಗಿ ಸರಿಪಡಿಸಲು ಸಾಧ್ಯವಾಗಲಿಲ್ಲ. ವಧಿಸಲ್ಪಟ್ಟವರ ಸಂಖ್ಯೆಯ ದೃಷ್ಟಿಯಲ್ಲೂ ನಿಸ್ಸಂಶಯವಾಗಿಯೂ ಇದು ಯಾವುದೇ ದೊಡ್ಡ ಸೋಲು ಆಗಿರಲಿಲ್ಲ. ಖುರೈಶಿಯರಂತಹ ಕೋಮಿನ ಎಪ್ಪತ್ತು ಎಪ್ಪತ್ತೆರಡು ಸಿಪಾಯಿಗಳು ಕೊಲ್ಲಲ್ಪಡುವುದರಿಂದ ಕೋಮಿನ ಸರ್ವನಾಶವಾಯಿತು ಎಂದು ಹೇಳುವಂತಿಲ್ಲ. ಹಾಗಿದ್ದರೆ ಬದ್ರ್ ಯುದ್ಧವನ್ನು **ಯೌಮುಲ್ ಫುರ್ಖಾನ್** ಎಂದು ಕರೆಯಲು ಕಾರಣವೇನು? ಈ ಪ್ರಶ್ನೆಗೆ ಅತ್ಯುತ್ತಮ ಉತ್ತರ ಪವಿತ್ರ ಖುರ್‌ಆನ್ ನೀಡಿದ್ದೇ ಆಗಿದೆ. ಅದೇನೆಂದರೆ, **ಯಖ್‌ತಅ ದಾಬಿರಲ್ ಕಾಫಿರೀನ್**. ನಿಜವಾಗಿಯೂ ಅಂದು ಸತ್ಯನಿಷೇಧಿಗಳ ತಾಯಿ ಬೇರು ಮುರಿದುಹೋಯಿತು. ಎಂದರೆ ಬದ್ರ್ ಯುದ್ಧದ ಏಟು ಸತ್ಯನಿಷೇಧಿಗಳ ಬೇರಿಗೆ ತಗುಲಿತು ಮತ್ತು ಅದು ಎರಡು ತುಂಡಾಯಿತು.

ಬದ್ರ್‌ನಲ್ಲಿ ನಿಜವಾಗಿಯೂ ಖುರೈಶಿಯರ ಬೇರು ತುಂಡಾಯಿತು. ಉತ್ಬ, ಶೈಬ, ಉಮಯ್ಯ ಬಿನ್ ಖ಼ಲ್ಫ್, ಉಖ್ಬ ಬಿನ್ ಅಬೀ ಮುಈತ್, ನಝ್ರ್ ಬಿನ್ ಹಾರಿಸ್ ಮುಂತಾದವರು ಖುರೈಶಿಯರ ಸಾಮುದಾಯಿಕ ಜೀವಿತದ ಜೀವಾತ್ಮಗಳಾಗಿದ್ದರು.

ಈ ಕುರಿತು ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಮುಸ್ಲಿಮರ ಮೇಲೆ ಅದರ ನಂತರವೂ ದೌರ್ಜನ್ಯಗಳು ನಡೆದಿದ್ದುವು ಮತ್ತು ಅವರಿಗೆ ಸತ್ಯನಿಷೇಧಿಗಳೊಡನೆ ಯುದ್ಧಗಳನ್ನು ಮಾಡಬೇಕಾಗಿ ಬಂದಿದ್ದುವು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಆದರೆ ಬದ್ರ್ ಯುದ್ಧವು ಸತ್ಯನಿಷೇಧಿಗಳ ಶಕ್ತಿಯನ್ನು ಪೂರ್ಣವಾಗಿ ಮುರಿದು ಹಾಕಿತ್ತು ಮತ್ತು ಮುಸ್ಲಿಮರ ಪ್ರತಾಪ ಅವರ ಮೇಲೆ ಪ್ರಕಟಗೊಂಡಿತು ಎಂಬುದರಲ್ಲೂ ಸಂಶಯವಿಲ್ಲ. ಬದ್ರ್ ಯುದ್ಧವನ್ನು ಪವಿತ್ರ ಖುರ್‌ಆನ್ ಫುರ್ಖಾನ್ ಎಂದು ಹೆಸರಿಸಿದೆ. ಇದರ ಕುರಿತು ಬೈಬಲಿನಲ್ಲೂ ಭವಿಷ್ಯವಾಣಿ ಇದೆ. ಹಿಜ್ರತಿನ ನಂತರ ಒಂದು ವರ್ಷ ಆದ ಮೇಲೆ ಸತ್ಯನಿಷೇಧಿಗಳ ಪೂರ್ತಿ ಶಕ್ತಿ ಮುರಿದುಹೋಗುವುದು ಮತ್ತು ಮುಸ್ಲಿಮರಿಗೆ ವಿಜಯ ಮತ್ತು ಯಶಸ್ಸಿನ ಪ್ರಭಾತ ಪ್ರಕಟಗೊಳ್ಳುವುದು ಎಂದು ಪವಿತ್ರ ಖುರ್‌ಆನ್ ಹನ್ನೊಂದನೇ ರಾತ್ರಿ ಎಂದು ಹೇಳಿ ಅದರ ಬಗ್ಗೆ ಭವಿಷ್ಯ ನುಡಿದಿತ್ತು. ಅದರಂತೆ ಸರಿಯಾಗಿ ಒಂದು ವರ್ಷ ನಂತರ ಬದ್ರ್ ಯುದ್ಧ ನಡೆಯಿತು. ಅದರಲ್ಲಿ ಸತ್ಯನಿಷೇಧಿಗಳ ದೊಡ್ಡ ದೊಡ್ಡ ಮುಖಂಡರು ವಧಿಸಲ್ಪಟ್ಟರು ಮತ್ತು ಮುಸ್ಲಿಮರಿಗೆ ಸ್ಪಷ್ಟವಾದ ಮೇಲುಗೈ ಲಭಿಸಿತು.

ಬದ್ರೀ ಸಹಾಬಿಯರ ಪ್ರಾಧಾನ್ಯ ಮತ್ತು ಶ್ರೇಷ್ಠತೆಯ ಅಂದಾಜು ಹೀಗೆಯೂ ಆಗುತ್ತದೆ. ಅದೇನೆಂದರೆ, ಈ ಸಮುದಾಯದಲ್ಲಿ ಬರಲಿರುವ ಮಹ್‌ದಿಯ ಒಂದು ಕುರುಹು ಹೀಗೆ ಹೇಳಲಾಗಿದೆ. ಅವರ ಬಳಿಯಲ್ಲಿ ಒಂದು ಗ್ರಂಥವಿರುವುದು. ಅದರಲ್ಲಿ ಬದ್ರ್ ಸಹಾಬಿಯರ ಒಟ್ಟು ಸಂಖ್ಯೆಯಾದ ಮುನ್ನೂರ ಹದಿಮೂರರಷ್ಟೇ ಸಂಖ್ಯೆಯಲ್ಲಿ ಸಹಾಬಿಯರ ಹೆಸರುಗಳು ಇರುವುವು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ವಾಗ್ದತ್ತ ಮಹ್‌ದಿಯ ಬಳಿ ಒಂದು ಮುದ್ರಿತ ಗ್ರಂಥವಿರುವುದು ಮತ್ತು ಅದರಲ್ಲಿ 313 ಸಹಾಬಿಯರ ಹೆಸರು ಬರೆಯಲಾಗಿರುವುದು ಎಂದು ಪ್ರಬಲವಾದ ಹದೀಸ್‌ನಲ್ಲಿ ವರದಿಯಾಗಿದೆ. ಆ ಭವಿಷ್ಯವಾಣಿ ಇಂದು ಈಡೇರಿದೆ. ಈ ಅನುಗ್ರಹೀತ ಉಮ್ಮತ್‌ನಲ್ಲಿ ಈ ಮೊದಲು ತಾನು ಮಹದಿಯಾಗಿರುವೆನು ಎಂದು ವಾದಿಸಿದ, ಅವರ ಕಾಲದಲ್ಲಿ ಮುದ್ರಣ ವ್ಯವಸ್ಥೆಯಿದ್ದು, ಅವರ ಬಳಿ 313 ಹೆಸರುಗಳು ಬರೆದ ಒಂದು ಗ್ರಂಥ ಸಹ ಇದ್ದ ಯಾವ ವ್ಯಕ್ತಿಯೂ ಹುಟ್ಟಲಿಲ್ಲ. ಈ ಕೆಲಸ ಮನುಷ್ಯನಿಗೆ ಮಾಡಲು ಸಾಧ್ಯವಿರುತ್ತಿದ್ದರೆ, ಇದಕ್ಕೆ ಮುಂಚೆ ತಾನು ಮಹ್‌ದಿಯಾಗಿರುವೆನು ಎಂದು ಹೇಳಿ ಅನೇಕ ಸುಳ್ಳುವಾದಿಗಳು ಬರುತ್ತಿದ್ದರು.

ಶೇಖ್ ಅಲಿ ಹಂಝ಼ ಬಿನ್ ಅಲಿ ಮಲಿಕ್ ಅತ್ತೂಸಿ ತನ್ನ ಗ್ರಂಥವಾದ "ಜವಾಹಿರುಲ್ ಇಸ್ರಾರ್"ನಲ್ಲಿ ಮಸೀಹ್ ಮೌಊದ್‌ರ ಬಗ್ಗೆ ಬರೆಯುತ್ತಾರೆ: **ಕದ್‌ಅ** ಎಂಬ ಹೆಸರಿನ ಗ್ರಾಮದಿಂದ ಮಹ್‌ದಿ ಆಗಮಿಸುವರು. ಅಲ್ಲಾಹನು ಆ ಮಹ್‌ದಿಯ ಸತ್ಯತೆಯನ್ನು ಸ್ಥಾಪಿಸುವವನು ಮತ್ತು ದೂರ ದೂರದಿಂದ ಅವರಿಗಾಗಿ ಸ್ನೇಹಿತರನ್ನು ಒಟ್ಟುಗೂಡಿಸುವನು. ಅವರ ಸಂಖ್ಯೆ ಬದ್ರಿನ ಜನರಿಗೆ ಸಮವಾಗಿರುವುದು. ಎಂದರೆ ಅವರು 313 ಆಗಿರುವರು. ಅವರ ಹೆಸರುಗಳನ್ನು ಅವರ ವಾಸಸ್ಥಳದೊಂದಿಗೆ ಮುದ್ರಿಸಲಾದ ಗ್ರಂಥದಲ್ಲಿ ಬರೆಯಲಾಗುವುದು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಇದಕ್ಕೆ ಮುಂಚೆ ವಾಗ್ದತ್ತ ಮಹ್‌ದಿ ಎಂದು ವಾದಿಸಿದ, ಅವರ ಬಳಿ ಮುದ್ರಿತ ಗ್ರಂಥವಿರುವ ಮತ್ತು ಅದರಲ್ಲಿ ಅವರ ಸ್ನೇಹಿತರ ಹೆಸರುಗಳು ಇರುವ ಯಾವುದೇ ವ್ಯಕ್ತಿ ಆಗಮಿಸಿದ ಘಟನೆ ಉಂಟಾಗಿಲ್ಲ ಎಂಬುದು ಸ್ಪಷ್ಟ. ಆದರೆ ನಾನು "ಆಯಿನ ಕಮಾಲಾತೆ ಇಸ್ಲಾಮ್"ನಲ್ಲೂ 313 ಹೆಸರುಗಳನ್ನು ಬರೆದಿದ್ದೆ. ಈಗ ಪುನಃ ನ್ಯಾಯಪೂರ್ತೀಕರಣಕ್ಕಾಗಿ 313 ಹೆಸರುಗಳನ್ನು ಮತ್ತೆ ಈ (ಅಂಜಾಮೇ ಆಥಮ್) ಗ್ರಂಥದಲ್ಲೂ ಬರೆಯುತ್ತಿದ್ದೇನೆ.

ಹದಿನಾಲ್ಕನೇ ಶತಮಾನ ಎಂತಹ ಕಾಲವೆಂದರೆ, ಒಳಿತು ಮತ್ತು ಅನುಗ್ರಹದ ಹದಿನಾಲ್ಕನೇ ಶತಮಾನ ಆಗಮಿಸುವುದು ಎಂದು ಮಹಿಳೆಯರು ಕೂಡ ಹೇಳುತ್ತಿದ್ದರು. ಅಲ್ಲಾಹನ ಮಾತು ಈಡೇರಿತು. ಹದಿನಾಲ್ಕನೇ ಶತಮಾನದಲ್ಲಿ ಅಲ್ಲಾಹನ ಇಂಗಿತ ಪ್ರಕಾರ ಅಹ್ಮದ್‌ರ (ಎಂದರೆ ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ) ಪ್ರತಿರೂಪ ಆಗಮಿಸಿತು. ಅದು ನಾನಾಗಿದ್ದೇನೆ. ಅದರ ಬಗ್ಗೆ ಬದ್ರಿನ ಘಟನೆಯಲ್ಲಿ ಭವಿಷ್ಯವಾಣಿಯಿತ್ತು. ಅವರಿಗಾಗಿ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಲಾಮ್ ತಲುಪಿಸಲು ಹೇಳಿದರು. ಆದರೆ ದುಃಖಕರವಾದುದೇನೆಂದರೆ, ಆ ದಿನ ಬಂದು ಹದಿನಾಲ್ಕನೇ ಚಂದ್ರ ಉದಿಸಿದಾಗ ನನ್ನನ್ನು ವ್ಯಾಪಾರಿ ಮತ್ತು ಸ್ವಾರ್ಥಿ ಎಂದು ಕರೆಯಲಾಯಿತು. ನೋಡಿಯೂ ನೋಡದ ಮತ್ತು ಅವರ ಕಾಲಘಟ್ಟದಲ್ಲಿ ಇದ್ದೂ ಅವರನ್ನು ಗುರುತಿಸದ ಜನರ ಮೇಲೆ ಖೇದವಾಗುತ್ತದೆ. ಹದಿನಾಲ್ಕನೇ ಶತಮಾನದಲ್ಲಿ ಅದಾಗುವುದು ಇದಾಗುವುದು ಎಂದು ಭಾಷಣ ಪೀಠವನ್ನು ಏರಿ ಅಳುತ್ತಿದ್ದ ಜನರು ಮರಣಗೊಂಡರು. ಆಗಮಿಸಿದ ವ್ಯಕ್ತಿ ಸುಳ್ಳುವಾದಿ ಎಂದು ಭಾಷಣಪೀಠವನ್ನು ಏರಿ ಹೇಳುವ ಜನರು ಈಗ ಉಳಿದಿರುವರು. ಇವರಿಗೆ ಏನಾಗಿದೆ? ಇವರೇಕೆ ನೋಡುತ್ತಿಲ್ಲ ಮತ್ತು ಏಕೆ ಯೋಚಿಸುತ್ತಿಲ್ಲ?

(ಅನಂತರ ಹುಝೂರ್, 17 ಫೆಬ್ರವರಿ 1904ರ ಡೈರಿಯಲ್ಲಿ ಬರೆಯಲಾಗಿದ್ದ "ಬದ್ರಿನ ಕಥೆ ಮರೆತು ಬಿಡಬೇಡ" ಎಂಬ ಹಝ್ರತ್ ಮಸೀಹ್ ಮೌಊದ್[ಅ]ರಿಗೆ ಲಭಿಸಿದ್ದ ದಿವ್ಯವಾಣಿ ಕುರಿತು ಹೀಗೆ ಹೇಳಿದರು:) ಅಲ್ಲಾಹನು ನಮ್ಮಲ್ಲಿ ವಿಶೇಷವಾಗಿ ಬದ್ರಿನ ಪ್ರಾಮುಖ್ಯತೆಯ ಅರಿವು ಮೂಡಿಸಲಿ. ಹಝ್ರತ್ ಪೈಗಂಬರ್[ಸ]ರ ಸತ್ಯಪ್ರೇಮಿಯಾದ ಮಸೀಹ್ ಮೌಊದ್[ಅ]ರ ಆಗಮನವನ್ನು ನಾವು ಮನವರಿಕೆ ಮಾಡುವವರಾಗಲಿ. ಮುಸ್ಲಿಮ್ ಸಮುದಾಯ ಸಹ ಬದ್ರಿನ ಈ ಘಟನೆಯ ನೈಜತೆಯನ್ನು ಅರಿಯುವಂತೆ ಅಲ್ಲಾಹನು ಮಾಡಲಿ. ಹಝ್ರತ್ ಪೈಗಂಬರ್[ಸ]ರ ದಾಸ್ಯದಲ್ಲಿ ಬಂದ ಮಸೀಹ್ ಮೌಊದ್‌ರನ್ನು ಅವರು ಗುರುತಿಸುವಂತಾಗಲಿ. ಹೀಗೆ ಮುಸ್ಲಿಮರಿಂದ ಕಣ್ಮರೆಯಾದ ಮಹಿಮೆಯನ್ನು ಪುನಃ ಗಳಿಸಲು ಮುಸ್ಲಿಮರು ಯೋಗ್ಯರಾಗುವಂತಾಗಲಿ.

(ಖುತ್ಬ ಸಾನಿಯಕ್ಕೆ ಮುಂಚೆ ಹುಝೂರ್ ಹೇಳಿದರು:) ಮುಂದಿನ ಜುಮಾದೊಂದಿಗೆ ಅಹ್ಮದಿಯಾ ಜಮಾಅತ್ ಯು.ಕೆ.ಯ ಜಲ್ಸ ಸಾಲಾನ ಆರಂಭವಾಗುವುದು – ಇನ್‌ಶಾ ಅಲ್ಲಾಹ್. ಈ ವರ್ಷ ಮೂರು ನಾಲ್ಕು ವರ್ಷಗಳ ವಿರಾಮದ ನಂತರ ವಿದೇಶದಿಂದ ಪುನಃ ಜಲ್ಸದಲ್ಲಿ ಭಾಗವಹಿಸಲು ಅತಿಥಿಗಳು ಬರುವರು. ಈಗಾಗಲೇ ಅತಿಥಿಗಳ ಆಗಮನ ಆರಂಭವಾಗಿ ಬಿಟ್ಟಿದೆ. ಅಲ್ಲಾಹನು ಈ ಎಲ್ಲ ಯಾತ್ರಿಕರ ಯಾತ್ರೆಗಳನ್ನು ಸುಲಭಗೊಳಿಸಲಿ. ಎಲ್ಲರೂ ಸುರಕ್ಷಿತವಾಗಿ ಇಲ್ಲಿಗೆ ಬಂದು ಮುಟ್ಟಲಿ ಮತ್ತು ಜಲ್ಸದ ಉದ್ದೇಶದಿಂದ ಸರಿಯಾದ ಪ್ರಯೋಜನವನ್ನು ಪಡೆಯುವಂತಾಗಲಿ. ಅದೇ ರೀತಿಯಲ್ಲಿ ಯು.ಕೆ.ಯಲ್ಲಿ ಇರುವ ಸಹೋದರರು ಸಹ ಯಥಾರ್ಥ ನಿಷ್ಠೆ ಮತ್ತು ಉತ್ಸಾಹದಿಂದ ಜಲ್ಸದಲ್ಲಿ ಭಾಗವಹಿಸಿರಿ. ನಾವು ಜಲ್ಸದ ದಿನಗಳಲ್ಲಿ ಆಧ್ಯಾತ್ಮಿಕ ಆಹಾರ ಗಳಿಸಲು ಪ್ರಯತ್ನಿಸಬೇಕು ಎಂಬ ಉದ್ದೇಶ ಮಾತ್ರ ಮುಂದೆ ಇರಬೇಕು.

(ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರನ್ನು ಹಝ್ರತ್ ಮಸೀಹ್ ಮೌಊದ್[ಅ]ರ ಅತಿಥಿಯೆಂದು ಅರಿತುಕೊಂಡು ಸೇವೆ ಮಾಡಬೇಕು ಎಂಬ ಸಂಗತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜಲ್ಸದಲ್ಲಿ ಡ್ಯೂಟಿಗಾಗಿ ನೇಮಿಸಲಾದ ಸೇವಕರ, ವಿವಿಧ ವಿಭಾಗಗಳ ಅದೇರೀತಿ ಜಲ್ಸದಲ್ಲಿ ಭಾಗವಹಿಸುವವರ ಮೇಲೆ ಇರುವ ಹೊಣೆಗಾರಿಕೆಗಳು ಮತ್ತು ಅತಿಥಿ ಸತ್ಕಾರದ ಬಗ್ಗೆ ವಿಶದವಾಗಿ ಅನೇಕ ಉಪದೇಶಗಳನ್ನು ನೀಡಿದ ನಂತರ ಹುಝೂರ್ ಹೇಳಿದರು:) ಸದಾ ಮುಗುಳ್ನಗುತ್ತಾ ಇರಿ ಎಂಬ ಹಝ್ರತ್ ಪೈಗಂಬರ್[ಸ]ರ ಉಪದೇಶವನ್ನು ಪ್ರತಿಯೊಬ್ಬರು ಯಾವಾಗಲೂ ಪಾಲಿಸಬೇಕು. ಎಲ್ಲ ಸೇವಕರು ಅತ್ಯುತ್ತಮವಾಗಿ ತಮ್ಮ ಡ್ಯೂಟಿಗಳನ್ನು ನೀಡುವಂತೆ ಅಲ್ಲಾಹನು ಮಾಡಲಿ ಮತ್ತು ಎಲ್ಲ ರೀತಿಯಲ್ಲೂ ಜಲ್ಸ ಅನುಗ್ರಹೀತವಾಗಲಿ. ಈ ಜಲ್ಸದ ವಿಜಯಕ್ಕಾಗಿ ವಿಶೇಷವಾಗಿ ಪ್ರತಿಯೊಬ್ಬ ಅಹ್ಮದಿ ದುಆಗಳನ್ನು ಮಾಡುತ್ತಿರಬೇಕು. ಅಲ್ಲಾಹನು ನಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ. ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, **'Masjid Baithul Futhuh'**, London, UK. On 21-07-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon